4 ನುಡಿದಂತೆ ನಡೆಯುತ್ತಿದ್ದೇವೆ...
ಸಾಧನೆಯ ನಾಲ್ಕು ವರ್ಷಗಳು

# ಸರ್ವರನ್ನು ಒಳಗೊಂಡ ಅಭಿವೃದ್ಧಿ ನಮ್ಮದು..



◆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನದಾಳದ ಮಾತುಗಳು..

ಹಸಿದ ಹೊಟ್ಟೆಗೆ ಅನ್ನ, ನೆಮ್ಮದಿಯ ಜೀವನಕ್ಕೆ ಆರೋಗ್ಯ, ವಾಸಕ್ಕೊಂದು ಸೂರು, ಸ್ವಾವಲಂಬಿ ಬದುಕಿಗಾಗಿ ಶಿಕ್ಷಣ, ದುಡಿಯುವ ಕೈಗಳಿಗೆ ಉದ್ಯೋಗ, ಶ್ರಮಕ್ಕೆ ತಕ್ಕ ಫಲ, ಅಸಹಾಯಕರಿಗೆ ರಕ್ಷಣೆ ನಮ್ಮ ಸರಕಾರದ ಆದ್ಯತೆ– ಇವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಪಷ್ಟ ನುಡಿಗಳು.

ಕರ್ನಾಟಕ ಸರಕಾರ ಈ ಮಾತುಗಳಿಗೆ ಬದ್ಧವಾಗಿ ನಡೆದುಕೊಂಡಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಜನಹಿತಕ್ಕಾಗಿ, ಅದರಲ್ಲೂ ಶೋಷಿತ ವರ್ಗದ ಕಲ್ಯಾಣಕ್ಕಾಗಿ ಸರಕಾರ ಕೈಗೊಂಡ ಕ್ರಮಗಳು ಅದೆಷ್ಟೋ. ಸರಕಾರದ ಹಲವು ಕ್ರಮಗಳು ರಾಷ್ಟ್ರಕ್ಕೇ ಮೇಲ್ಪಂಕ್ತಿಯಾಗುವಂತಿದೆ.

ಭೂಸುಧಾರಣೆ ಕಾಯ್ದೆಯ ಮಾದರಿಯಲ್ಲಿ ತಾಂಡಗಳಲ್ಲಿ, ಹಟ್ಟಿ ಮಜರೆಗಳಲ್ಲಿ ವಾಸಿಸುವ ಜನರಿಗೆ ಭೂಮಿಯ ಹಕ್ಕು ನೀಡುವ ಕಾಯ್ದೆ ಮಾಡಲಾಗಿದೆ. ರಾಜ್ಯದಲ್ಲಿ ತಾಂಡಗಳು, ಹಟ್ಟಿಗಳು ಮಜರೆಗಳಲ್ಲಿ ಸುಮಾರು 58 ಸಾವಿರ ಜನವಸತಿಗಳಿವೆ. ಅವರಿಗೆ ಬೇರೆ ಏನೂ ದಾಖಲಾತಿಗಳನ್ನು ನೋಡದೆಯೇ, ಅವರು ವಾಸ ಮಾಡಿರುವುದನ್ನೇ ದಾಖಲಾತಿ ಎಂದು ಪರಿಗಣಿಸಿ ಅವರ ಮನೆ ಮತ್ತು ಅದು ಭೂಮಿಯ ಒಡೆತನವನ್ನು ಅವರಿಗೇ ಬಿಟ್ಟುಕೊಡಲು ಸರಕಾರ ಉದ್ದೇಶಿಸಿದೆ. ಅದು ಸರಕಾರಿ ಭೂಮಿಯಾಗಲೀ, ಖಾಸಗಿ ಭೂಮಿಯಾಗಲಿ ಜನರ ಹಕ್ಕಿಗೆ ಧಕ್ಕೆಯಾಗದು ಎನ್ನುವುದು ಮುಖ್ಯಮಂತ್ರಿಗಳ ಭರವಸೆಯ ನುಡಿ.ರಾಜ್ಯ ಸರಕಾರದ ಈ ಮಹತ್ವಾಕಾಂಕ್ಷಿ ಯೋಜನೆಗೆ ರಾಷ್ಟ್ರಪತಿಗಳ ಅಂಕಿತವೂ ದೊರಕಿದೆ.

ಸರಕಾರ ಎಲ್ಲರನ್ನೂ ಜೊತೆಗೇ ಕೊಂಡೊಯ್ಯುವ ಕೆಲಸ ಮಾಡುತ್ತಿದೆ. ನಗರ ಮತ್ತು ಗ್ರಾಮೀಣ ಪ್ರದೇಶ ಎಂಬ ತಾರತಮ್ಯವನ್ನು ಸರಕಾರ ಮಾಡಿಲ್ಲ. ಎರಡೂ ಕಡೆಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿದೆ.

'ನಮ್ಮದು ಎಲ್ಲರನ್ನೂ ಅಭಿವೃದ್ಧಿಪಡಿಸುವ, ಎಲ್ಲರನ್ನೂ ಒಳಗೊಂಡಂಥ ಅಭಿವೃದ್ಧಿ. ರೈತರು, ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು, ಮಹಿಳೆಯರು, ಕಾರ್ಮಿಕರು, ಯುವಕರು, ಎಲ್ಲ ವರ್ಗದ ಜನರನ್ನೂ ಕೂಡ, ಎಲ್ಲರಿಗೂ ಕಾರ್ಯಕ್ರಮಗಳನ್ನು ಕೊಡುವ ಕೆಲಸ ಮಾಡಿದ್ದೇವೆ. ಈ ಸರ್ಕಾರದಿಂದ ಎಲ್ಲಾ ಜನತೆ ಒಂದಲ್ಲ ಒಂದು ರೀತಿಯಲ್ಲಿ ಪ್ರಯೋಜನ ಪಡೆದುಕೊಂಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ನುಡಿದಂತೆ ನಡೆದಿದ್ದೇವೆ' ಎನ್ನುತ್ತಾರೆ ಮುಖ್ಯಮಂತ್ರಿಗಳು.

'ನಮ್ಮದು ಸರ್ವರನ್ನೂ ಒಳಗೊಂಡಿರುವ, ಸರ್ವರನ್ನೂ ಬೆಸೆಯುವ ಮತ್ತು ಸರ್ವರಿಗೂ ಸಮಪಾಲು – ಸಮಬಾಳು ನೀಡುವ, ನಾಡಿನ ಪ್ರತಿಯೊಬ್ಬ ಪ್ರಜೆಯ ಜೀವನ ಮಟ್ಟ ಸುಧಾರಣೆಯನ್ನು ಗುರಿಯಾಗಿಟ್ಟುಕೊಂಡ ಸರ್ವೋದಯ ತತ್ವದ ಅಭಿವೃದ್ಧಿ ಮಾದರಿ. ಇದನ್ನು ಕರ್ನಾಟಕ ಅಭಿವೃದ್ಧಿ ಮಾದರಿ ಎಂದು ನಾನು ಹೆಮ್ಮೆಯಿಂದ ಕರೆಯುತ್ತೇನೆ. ಈ ಅಭಿವೃದ್ಧಿ ಮಾದರಿಗೆ ಸಾಮಾಜಿಕ ನ್ಯಾಯದ ಕನಸುಗಾರ ಬಸವಣ್ಣ, ಗ್ರಾಮ ಸ್ವರಾಜ್ಯದ ಹರಿಕಾರ ಮಹಾತ್ಮ ಗಾಂಧಿ ಮತ್ತು ಪ್ರಜಾಪ್ರಭುತ್ವದ ಹೋರಾಟಗಾರ ಡಾ.ಬಿ.ಆರ್. ಅಂಬೇಡ್ಕರ್ ಮತ್ತಿತರ ಸಾಮಾಜಿಕ ಮತ್ತು ರಾಜಕೀಯ ಚಿಂತಕರ ಆಶಯಗಳು ಪ್ರೇರಣೆ ನೀಡಿವೆ. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಆಶ್ವಾಸನೆಗಳ ಪೈಕಿ ಶೇ 95ರಷ್ಟನ್ನು ಸರಕಾರ ಈಡೇರಿಸಿದೆ.'

## ನೀರಾವರಿಗೆ ಒತ್ತು

ನೀರಾವರಿಗೆ ಸರಕಾರ ಬಹಳಷ್ಟು ಒತ್ತು ನೀಡುತ್ತ ಬಂದಿದೆ. ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 58,392 ಕೋಟಿ ರೂಪಾಯಿ ಒದಗಿಸಿದೆ. ವಾಸ್ತವವಾಗಿ ಸರಕಾರ ಐದು ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿ ವ್ಯಯಿಸುವ ವಾಗ್ದಾನ ಮಾಡಿತ್ತು. ಆದರೆ ಸರಕಾರ ನಾಲ್ಕು ವರ್ಷಗಳಲ್ಲೇ ಗುರಿಗಿಂತಲೂ ಅಧಿಕ ಮೊತ್ತವನ್ನು ವೆಚ್ಚ ಮಾಡಿ. 6.4 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಿದೆ.

ಕೃಷಿಗೆ 5080 ಕೋಟಿ ರೂ, ತೋಟಗಾರಿಕೆಗೆ 1091 ಕೋಟಿ ರೂ, ಪಶು ಸಂಗೋಪನೆಗೆ 2245 ಕೋಟಿ ರೂ, ರೇಷ್ಮೆ ಅಭಿವೃದ್ಧಿಗೆ 429 ಕೋಟಿ ರೂ, ಮೀನುಗಾರಿಕೆಗೆ 337 ಕೋಟಿ ರೂ, ನೀರಾವರಿಗೆ 15,929 ಕೋಟಿ ರೂ, ಸಣ್ಣ ನೀರಾವರಿಗೆ 2099 ಕೋಟಿ ರೂ, ಸಹಕಾರ ಕ್ಷೇತ್ರಕ್ಕೆ 1663 ಕೋಟಿ ರೂ, ವಿದ್ಯುತ್ ಸಬ್ಸಿಡಿಗೆ 9000 ಕೋಟಿ ರೂ, ಹಾಲಿನ ಪ್ರೋತ್ಸಾಹ ಧನಕ್ಕೆ 1206 ಕೋಟಿ ರೂ. ಹಾಗೂ ಸಾಲದ ಮೇಲಿನ ಬಡ್ಡಿ ಸಹಾಯಧನಕ್ಕಾಗಿ 800 ಕೋಟಿ ರೂ– ಹೀಗೆ